ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು):- ಮಾನ್ಯ ಮಹದೇವಪ್ಪನವರು, ಸಂಪಂಗಿಯವರು ಹೇಳಿದ ಹಾಗೆ ಇಡೀ ರಾಜ್ಯದಲ್ಲಿ Rajiv Gandhi Submission Scheme ನಲ್ಲಿ 300 Multi-Village Schemes ಅನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಅದರಲ್ಲಿ 100 schemes ನಾವು ಈಗಾಗಲೇ complete ಮಾಡಿದ್ದೇವೆ. 200 Multi_Village Schemes ಈಗಾಗಲೇ process start ಆಗಿವೆ. ಚಾಮರಾಜನಗರದಲ್ಲಿ ಬಹಳ ವರ್ಷಗಳಿಂದ ಸಮಸ್ಯೆ ಇತ್ತು. ಅಲ್ಲಿಯೂ ಸಹಿತ ಇವತ್ತು ನೂರಾರು ಹಳ್ಳಿಗಳಿಗೆ ಕವರ್ ಆಗುವಂತೆ Multi_Village Schemes ಗೆ approval ಕೊಟ್ಟಿದ್ದೇವೆ. ಡಿ-ಫ್ಲೋರೈಡ್ ಇರುವಂಥ ಶುದ್ಧವಾದಂಥ ಮತ್ತು quality drinking water ಕೊಡುವುದಕ್ಕೆ ಸರ್ಕಾರ ಬದ್ಧವಾಗಿದೆ, ಹಾಗಾಗಿ ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಬಂಟ್ವಾಳ ವಿಧಾನಸಭಾ ಕ್ಷೇತ್ರಕ್ಕೆ ಆರಾಧನಾ ಯೋಜನೆಯಡಿ ಬಿಡುಗಡೆಯಾದ ಹಣದ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	20 (94)
ಸದಸ್ಯರ ಹೆಸರು	:	ಶ್ರೀ ರಮಾನಾಥ್ ರೈ.ಬಿ.
ವಿಷಯ	:	ಆರಾಧನಾ ಯೋಜನೆಯಡಿ ಒದಗಿಸಿದ ಅನುದಾನ
ಉತ್ತರಿಸುವ ಸಚಿವರು	:	ಡಾ॥ ವಿ.ಎಸ್.ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ)

ಪ್ರಶ್ನೆಗಳು:

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಬಂಟ್ವಾಳ ವಿಧನಸಭಾ ಕ್ಷೇತ್ರಕ್ಕೆ ಅರಾಧನಾ ಯೋಜನೆಯಡಿಯಲ್ಲಿ ಬಿಡುಗಡೆಯಾದ ಹಣವೆಷ್ಟು;

ಆ) ಕಡಿಮೆ ಪ್ರಮಾಣದಲ್ಲಿ ಹಣ ಬಿಡುಗಡೆಯಾಗಿದ್ದರೆ ಕಾರಣಗಳೇನು?

(ವಿವರ ನೀಡುವುದು).

ಉತ್ತರಗಳು:

ಅ) ಆರಾಧನಾ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ಬಂಟ್ವಾಳ ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿವೆ:–

ವರ್ಷ	(ರೂ. ಲಕ್ಷಗಳಲ್ಲಿ)
2008–09	ಯಾವುದೂ ಇಲ್ಲ
2009–10	89,284.00
2010–11	71,427.00

ಆ) ಆರಾಧನಾ ಯೋಜನೆಯಡಿ ಒದಗಿಸಲಾದ ಅನುದಾನವನ್ನು ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಸಮನಾಗಿ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುವುದು.

ಶ್ರೀ ಬಿ.ರಮಾನಾಥ ರೈ (ಬಂಟ್ವಾಳ):– ಸಾಮಾಜಿಕ ನ್ಯಾಯದಿಂದ ದೂರ ಉಳಿದಿರತಕ್ಕಂಥ ದುರ್ಬಲ ವರ್ಗದವರು ನಡೆಸಿಕೊಂಡು ಬರತಕ್ಕಂಥ ಆರಾಧನಾ ಮಂದಿರಗಳಿವೆ. ಅದಕ್ಕೆ ಆರಾಧನಾ ಯೋಜನೆಯಡಿ ಹಣವನ್ನು ಕೊಡುತ್ತಿದ್ದರು. ಪ್ರಥಮ ವರ್ಷ ನನಗೆ 11,25,000 ರೂಪಾಯಿಗಳು ಬಿಡುಗಡೆಯಾಗಿತ್ತು. ಆ ನಂತರದ ವರ್ಷ ಒಂದು ರೂಪಾಯಿಯೂ ಬಿಡುಗಡೆಯಾಗಿಲ್ಲ. ಆನಂತರ ಉತ್ತರದಲ್ಲಿರುವ ಪ್ರಕಾರ 2009–10 ರಲ್ಲಿ 89,284.00 ರೂಪಾಯಿಗಳು ಬಿಡುಗಡೆಯಾಗಿದೆ. ಆನಂತರ 2010–11ರಲ್ಲಿ 71,427.00 ಬಿಡುಗಡೆಯಾಗಿದೆ. ಈ ವರ್ಷ 49,000 ರೂಪಾಯಿಗಳು ಬಿಡುಗಡೆಯಾಗಿದೆ. ಈ ಎಲ್ಲಾ 59 ಗ್ರಾಮಗಳಲ್ಲಿ ಬಹಳಷ್ಟು ದುರ್ಬಲ ವರ್ಗದವರು ನಡೆಸಿಕೊಂಡು ಬರುವಂಥ ಆರಾಧನಾ ಸಣ್ಣ ಸಣ್ಣ ಮಂದಿರಗಳು, ದೇವಸ್ಥಾನಗಳಿಗೆ 79,000, 49,000 ರೂಪಾಯಿಗಳನ್ನು ಕೊಟ್ಟರೆ ನಾವೆಲ್ಲಾ ಕಮಿಟಿಯಲ್ಲಿ ಮೀಟಿಂಗ್ ಮಾಡಿ ನಿಮಗೆ ಆರಾಧನಾ ಯೋಜನೆಯಡಿ ಹಣ ಕೊಡುತ್ತೇವೆಂದು ಭರವಸೆ ಕೊಟ್ಟರೆ ನಮ್ಮ ಪರಿಸ್ಥಿತಿ ಏನು? ಬಹುಶಃ ಅದಕ್ಕೆ ಸಹಕಾರ ಮಾಡುವ

ನಿಟ್ಟಿನಲ್ಲಿ ತಾವು ಯಾವ ರೀತಿ ಕ್ರಮವನ್ನು ಕೈಗೊಳ್ಳುತ್ತೀರಿ? ಎಂದು ತಮ್ಮಲ್ಲಿ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಬಹುಶಃ ನೀವು ಮತ್ತೆ ಕೊಟ್ಟಿದ್ದೀರಿ. ನಾವು ಕೇಳಿರುವುದು equal distribution ಮಾಡುವ ಪ್ರಶ್ನೆ ಅಲ್ಲ. ಈಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರು ಇವರು ನಡೆಸಿಕೊಂಡು ಬರುವಂತಹ ಸಣ್ಣ ಸಣ್ಣ ದೇವಸ್ಥಾನಗಳು. ಅವರಿಗೆ ಆರ್ಥಿಕವಾಗಿ ಶಕ್ತಿಯಿಲ್ಲ ಶಕ್ತಿಯಲ್ಲದವರಿಗೆ ಏನಾದರೂ ಸಹಾಯ ಮಾಡುವಂತಹ ದೃಷ್ಟಿಯಲ್ಲಿ ಈ ಕಾರ್ಯಕ್ರಮ ಶುರುವಾಗಿದೆ. ನಾವು ನೋಡಿದ್ದೇವೆ. ಹಿಂದೆ ದೇವಸ್ಥಾನಗಳಿಗೆ ಕೋಟಿಗಟ್ಟಲೆ ಹಣ ಕೊಡುವುದನ್ನು ನಾವು ನೋಡಿದ್ದೇವೆ. ಆ ರೀತಿ ಆರಾಧನಾ ಯೋಜನೆಯಡಿ ಸ್ವಲ್ಪ ಹಣ ಕೊಡಬೇಕು. ಬಡವರು ಹಾಗೂ ದುರ್ಬಲ ವರ್ಗದವರಿಗೆ ಆರಾಧನಾ ಯೋಜನೆಯಡಿ ಸ್ವಲ್ಪ ಹಣವನ್ನು ಕೊಡುವುದು ಸೂಕ್ತ ಎನ್ನುವುದು ನನ್ನ ಪ್ರಶ್ನೆ ಅಷ್ಟೇ.

(ಗೊಂದಲ)

ಶ್ರೀ ವೈ.ಎನ್.ರುದ್ರೇಶ್‌ಗೌಡ:– ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ತಾಲ್ಲೂಕುಗಳಿಗೂ ವರ್ಷಕ್ಕೆ...

(ಗೊಂದಲ)

ಉಪಾಧ್ಯಕ್ಷರು:– ತಾವು ಕುಳಿತುಕೊಳ್ಳಿ. ಅವರ ಪ್ರಶ್ನೆಗೆ ಉತ್ತರ ಕೊಡಲಿ. ನೀವು ಮತ್ತೆ ಕೇಳಿ.

(ಗೊಂದಲ)

ಶ್ರೀ ವೈ.ಎನ್.ರುದ್ರೇಶ್‌ಗೌಡ:– ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ತಾಲ್ಲೂಕುಗಳಿಗೂ ವರ್ಷಕ್ಕೆ ಕನಿಷ್ಠ ಆರು ಲಕ್ಷ ರೂಪಾಯಿಗಳಂತೆ ಹಣ ಕೊಡಬೇಕು.

ಉಪಾಧ್ಯಕ್ಷರು:– ಇಲ್ಲಿ ಮಾನ್ಯ ರಮಾನಾಥ್ ರೈರವರು ಪ್ರಶ್ನೆ ಕೇಳಿದ್ದಾರೆ. ಅವರ ಪ್ರಶ್ನೆಗೆ ಉತ್ತರ ಕೊಡಲಿ. ನೀವು ಮತ್ತೆ ಕೇಳಿ.

ಶ್ರೀ ವೈ.ಎನ್.ರುದ್ರೇಶ್‌ಗೌಡ:– ರೂ. 89 ಸಾವಿರ ಹಾಗೂ ರೂ. 71 ಸಾವಿರಗಳಂತೆ ವರ್ಷಕ್ಕೆ ಕೊಟ್ಟರೆ ಇದು ಯಾವ ಮೂಲೆಗೂ ಸಾಲುವುದಿಲ್ಲ.

ಕನಿಷ್ಠ ರೂ. 6 ಲಕ್ಷಗಳಂತೆ ಎಲ್ಲಾ ತಾಲ್ಲೂಕುಗಳಿಗೂ ಆರಾಧನಾ ಯೋಜನೆಯಡಿ ತಾವು compulsory ಯಾಗಿ ಇಡಬೇಕು. ನಾನು ಈ ಬಗ್ಗೆ ಎಷ್ಟೋ ಸಲ ಪ್ರಶ್ನೆ ಮಾಡಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು:– ಇದು ಬಂಟ್ವಾಳ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಸಮಸ್ಯೆ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರಿ ಕೆ.ಎಂ.ಶಿವಲಿಂಗೇಗೌಡ:– ಮಾನ್ಯ ಉಪಾಧ್ಯಕ್ಷರೆ, ಆರಾಧನಾ ಸಮಿತಿಯನ್ನು ರದ್ದು ಮಾಡುವುದಕ್ಕೆ ಹೇಳಿ. ಶಾಸಕರ ಗೌರವವಾದರೂ ಉಳಿಯುತ್ತದೆ.

(ಗೊಂದಲ)

ಉಪಾಧ್ಯಕ್ಷರು:– ಗೌಡರೇ, ತಾವು ಬೇರೆ ರೀತಿಯಲ್ಲಿ ಚರ್ಚೆಗೆ ತನ್ನಿ. ದಯವಿಟ್ಟು ತಾವು ಕುಳಿತುಕೊಳ್ಳಿ. ಇದು ಬಂಟ್ವಾಳ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಸಮಸ್ಯೆ.

(ಗೊಂದಲ)

ಶ್ರೀ. ಕೆ.ಎಂ.ಶಿವಲಿಂಗೇಗೌಡ:– ಆರಾಧನಾ ಸಮಿತಿಯನ್ನು ರದ್ದು ಮಾಡಿ. ಶಾಸಕರ ಗೌರವ ಉಳಿಯುತ್ತದೆ. ಅದನ್ನು ರದ್ದು ಮಾಡಿ.

(ಗೊಂದಲ)

ಶ್ರೀ ವೈ.ಎನ್.ರುದ್ರೇಶ್‌ಗೌಡ:– ಎಲ್ಲಾ ತಾಲ್ಲೂಕುಗಳಿಗೂ 6 ಲಕ್ಷ ರೂಪಾಯಿಗಳಂತೆ ಹಣ ಇಡಿ.

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ:– ನಾಮಕಾವಸ್ಥೆಗೆ ಅಧ್ಯಕ್ಷರನ್ನು ಮಾಡುತ್ತಾರೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:– ನಾಮಕಾವಸ್ಥೆಗೆ ಅಧ್ಯಕ್ಷರುಗಳನ್ನು ಮಾಡಿಕೊಂಡು ಒಬ್ಬರಿಗೆ 5 ಸಾವಿರ ರೂಪಾಯಿಗಳಂತೆ ಬರುತ್ತದೆ.

(ಗೊಂದಲ)

ಶ್ರೀ ವೈ.ಎನ್.ರುದ್ರೇಶ್‌ಗೌಡ:– ನೀವು 71 ಸಾವಿರ ರೂಪಾಯಿಗಳನ್ನು ಕೊಟ್ಟರೆ ಸಾಕಾಗುತ್ತದೆಯೇ?

(ಗೊಂದಲ)

ಶ್ರೀ ಸಿ.ಎಸ್.ಪುಟ್ಟೇಗೌಡ:– ಶಾಸಕರಿಗೆ ಕಿಮ್ಮತ್ತೇ ಇಲ್ಲ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಏಕೆ ಆ ಸಮಿತಿಯನ್ನು ರಚನೆ ಮಾಡಿದ್ದೀರಿ? ದಯವಿಟ್ಟು ಆರಾಧನಾವನ್ನು ರದ್ದು ಮಾಡಿ.

(ಗೊಂದಲ)

ಶ್ರೀ ಸಿ.ಎಸ್.ಪುಟ್ಟೇಗೌಡ:– ಕೆಲವು ದೇವಸ್ಥಾನಗಳಿಗೆ 50 ಲಕ್ಷ, ಒಂದು ಕೋಟಿ ಹಣ ಕೊಟ್ಟಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:– ನೀವು ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಕೊಡಿ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವೈ.ಎನ್.ರುದ್ರೇಶ್‌ಗೌಡ:– ಅದನ್ನು ಕ್ಯಾನ್ಸಲ್ ಮಾಡಿ. ಇಲ್ಲದಿದ್ದರೆ ಇಂತಿಷ್ಟು ಎಂದು allocate ಮಾಡಿ.

(ಗೊಂದಲ)

ಉಪಾಧ್ಯಕ್ಷರು:– ಕುಳಿತುಕೊಳ್ಳಿ ಸಂಪಂಗಿಯವರೇ,

(ಗೊಂದಲ)

ಶ್ರೀ. ಎನ್.ಸಂಪಂಗಿ:– ದೇವಸ್ಥಾನಗಳ ಹೆಸರನ್ನೇ ಹೇಳಿಕೊಂಡು ಅಧಿಕಾರಕ್ಕೆ ಬಂದು, ದೇವಸ್ಥಾನಗಳನ್ನೇ ಬಿಟ್ಟು ಹಾಕಿದ್ದಾರೆ.

(ಗೊಂದಲ)

ಶ್ರೀ. ವಿ.ಮುನಿಯಪ್ಪ:– ಒಂದು ವಿಚಾರ. ಇದರಲ್ಲಿ ತಾರತಮ್ಯ ಏಕೆ ಆಯಿತು? ಆರಾಧನಾ ಯೋಜನೆಯಲ್ಲಿ ತಾರತಮ್ಯವಾಗುತ್ತಿದೆ.

(ಗೊಂದಲ)

ಶ್ರೀ. ಕೆ.ಎಂ.ಶಿವಲಿಂಗೇಗೌಡ:– ಪೂರ್ತಿ ಕೈಬಿಟ್ಟಿಲ್ಲ. ಬೇರೆ ರೀತಿ ಕೊಡುತ್ತಿದ್ದಾರೆ. ಈ ಆರಾಧನಾ ಸಮಿತಿಗೆ ಕೊಡುತ್ತಿಲ್ಲ ಅದನ್ನು ರದ್ದು ಮಾಡಿ.

ಉಪಾಧ್ಯಕ್ಷರು:– ಡಾಕ್ಟರೇ, ಉತ್ತರ ಕೊಡಿ.

(ಗೊಂದಲ)

ಶ್ರೀ. ವಿ.ಮುನಿಯಪ್ಪ:– ನೇರವಾಗಿ ಬೇಕಾದ ಶಾಸಕರಿಗೆ ಕೊಡುವುದು ಹಾಗೂ ಕೆಲವು ಕ್ಷೇತ್ರಗಳಿಗೆ ಕೇವಲ 70–80 ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದು ಇದು ಬಹಳ ತಾರತಮ್ಯವಾಗುತ್ತಿದೆ. ಇದು ಬಹಳ ಪಕ್ಷಪಾತವಾಗುತ್ತಿದೆ. ದಯವಿಟ್ಟು ಆರಾಧನಾ ಯೋಜನೆಯ ಅನುಷ್ಠಾನದಲ್ಲಿ ಇಂತಹದ್ದು ಆಗಬಾರದು. 75 ಸಾವಿರ ಕೊಡುವುದು, ಮಾಡುವುದು...

ಶ್ರೀ ವೈ.ಎನ್.ರುದ್ರೇಶ್‌ಗೌಡ:– ತಾಲ್ಲೂಕಿನಲ್ಲಿ ಇದಕ್ಕೆ ಒಂದು ಸಮಿತಿ ಬೇರೆ ಮಾಡಿದ್ದಾರೆ. ಏತಕ್ಕೆ ಈ ಸಮಿತಿ? ಈ ಸಮಿತಿಯನ್ನು ಏಕೆ ಮಾಡಬೇಕು. ಇದನ್ನು compulsory ಯಾಗಿ ಪ್ರತಿ ತಾಲ್ಲೂಕಿಗೂ 6 ಲಕ್ಷ ರೂಪಾಯಿಗಳಂತೆ ಕೊಡುವುದನ್ನು ಮಾಡಿ.

ಉಪಾಧ್ಯಕ್ಷರು:– ಮಂತ್ರಿಗಳೇ ಉತ್ತರಿಸಿ.

ಡಾ. ವಿ.ಎಸ್.ಆಚಾರ್ಯ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಆರಾಧನಾ ಯೋಜನೆ ಪ್ರಕಾರ ನಮಗೆ ಕೊಟ್ಟಿರುವಂತಹ ಹಣದಲ್ಲಿ ಎಲ್ಲಾ ಕ್ಷೇತ್ರಗಳಿಗೂ ಸರಿಸಮಾನವಾಗಿ ಕೊಟ್ಟಿದ್ದೇವೆ. ಈಗ ಕಡಿಮೆಯಿದೆ, ಜಾಸ್ತಿ ಮಾಡಲು ಇವರ ಬೇಡಿಕೆ ಬಂದಿದೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

(ಗೊಂದಲ)

ಶ್ರೀ. ಕೆ.ಎಂ.ಶಿವಲಿಂಗೇಗೌಡ:– ಇದು ಉತ್ತರ ಸರಿಯಿಲ್ಲ.

(ಗೊಂದಲ)

ಶ್ರೀ. ಪಿ.ಎಂ.ಅಶೋಕ:– ಮೊದಲು ಕಮಿಟಿಗಳನ್ನು ರದ್ದು ಮಾಡಿ.

(ಗೊಂದಲ)

ಉಪಾಧ್ಯಕ್ಷರು:– ರಮಾನಾಥ ರೈರವರು ಮಾತನಾಡುತ್ತಾರೆ. ಉಳಿದವರು ಕುಳಿತುಕೊಳ್ಳಿ. ರಮಾನಾಥ್ ರೈರವರೇ ಕೇಳಿ.

(ಗೊಂದಲ)

ಶ್ರೀ. ಕೆ.ಎಂ.ಶಿವಲಿಂಗೇಗೌಡ:– ಮೊದಲು ಕಮಿಟಿ ರದ್ದು ಮಾಡಿ. ನಮ್ಮ ಮರ್ಯಾದೆ ಉಳಿಸಿ.

(ಗೊಂದಲ)

ಶ್ರೀ. ವೈ.ಎನ್.ರುದ್ರೇಶ್‌ಗೌಡ:– ನಮಗೆ ಮರ್ಯಾದೆ ಇಲ್ಲವೇ? 50–60 ಸಾವಿರ ಇಟ್ಟುಕೊಂಡು ಏನು ಮಾಡುವುದು? ನಮಗೆ ಮರ್ಯಾದೆ ಇಲ್ಲವೇ?

(ಗೊಂದಲ)

ಉಪಾಧ್ಯಕ್ಷರು:– ಬೇರೆ ರೀತಿಯಲ್ಲಿ ತನ್ನಿ. ಚರ್ಚೆ ಮಾಡೋಣ. ಈಗ ರಮಾನಾಥ ರೈರವರ ಪ್ರಶ್ನೆಗೆ ಉತ್ತರ ಹೇಳಿದ್ದಾರೆ. ರೈರವರೇ ಕೇಳಿ.

ಶ್ರೀ ಬಿ. ರಮಾನಾಥ ರೈ:– ಈಗ ನಾನು ಮೂಲಭೂತವಾಗಿ ಕೇಳುವ ಪ್ರಶ್ನೆ ಏನೆಂದರೆ, ಕಳೆದ ಕೆಲವಾರು ವರ್ಷಗಳಿಂದ ತಾಲ್ಲೂಕಿಗೆ ಪ್ರತಿ ವರ್ಷ 10–15 ಲಕ್ಷ ರೂಪಾಯಿಗಳು ಬರುತ್ತಿತ್ತು. ಒಂದು ವರ್ಷ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಆನಂತರ ಕೊಟ್ಟಿರುವಂತಹ 89 ಸಾವಿರ ರೂಪಾಯಿಗಳು, ಅದು ಏಕೆ, ಅದನ್ನು ರದ್ದು ಮಾಡಿ. ನನ್ನ ಕಳಕಳಿ ವಿನಂತಿಯಿಷ್ಟೇ. ಆ 71 ಸಾವಿರ ರೂಪಾಯಿಗಳು ಹಾಗೂ 89 ಸಾವರ ರೂಪಾಯಿಗಳಂತೆ ಒಂದು ಕ್ಷೇತ್ರಕ್ಕೆ ಕೊಟ್ಟರೆ ನಾವು ಯಾರಿಂದ ಬೈಗಳನ್ನು ತಿನ್ನುವುದು? ಆ ಆರಾಧನಾ ಯೋಜನೆಯನ್ನೇ ರದ್ದು ಮಾಡಿ. ನಮ್ಮದು ಏನೂ ಅಭ್ಯಂತರವಿಲ್ಲ. ಆ ಯೋಜನೆ ಇರುವ ಕಾಲಕ್ಕೆ ನೀವು ಅದಕ್ಕೆ ದುಡ್ಡನ್ನು ಒದಗಿಸುವಂತಹದ್ದು, ಬಹುಶಃ ಕಳೆದ 3–4 ವರ್ಷಗಳಿಂದ ಈ ರೀತಿಯಾಗಿದೆ. ಅದಕ್ಕಿಂತ ಹಿಂದಿನ ವರ್ಷಗಳಲ್ಲಿ 10–15 ಲಕ್ಷ ರೂಪಾಯಿಗಳು ಬರುತ್ತಿತ್ತು. ಕಳೆದ ನಾಲ್ಕು ವರ್ಷಗಳಿಂದ ದುಡ್ಡು ಇಲ್ಲವೆಂದು ಹೇಳಿದರೆ ಹೇಗೆ? ಅದಕ್ಕೆ ಕಮಿಟಿ ಇದೆ. ನಮ್ಮಲ್ಲಿ ನೀವು ಮಾಡಿರುವಂತಹ ಕಮಿಟಿಯವರು ರಾಜೀನಾಮೆ ಕೊಟ್ಟಿದ್ದಾರೆ. ನಾವು

ಇದಕ್ಕೆ ಬರುವುದಿಲ್ಲ, ಇದರಲ್ಲಿ ಯಾವುದೇ ಗೌರವವಿಲ್ಲ. ಯಾವುದೇ ಪ್ರಯೋಜನವಿಲ್ಲ, ಯಾರಿಗೂ ಸಹಾಯ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು ಅವರ ಭಾವನೆ. ಒಂದೇ ಒಂದು ವಿಚಾರವನ್ನು ಹೇಳುವುದು ಏನೆಂದರೆ, ಈ ಯೋಜನೆಯನ್ನು ರದ್ದು ಮಾಡಿ. ಇಲ್ಲದಿದ್ದರೆ ಇದಕ್ಕೆ ಹಣವನ್ನು ಕೊಡುವುದಕ್ಕೆ ತಾವು ಪ್ರಯತ್ನವನ್ನು ಮಾಡಬೇಕು. ತಾವು ಖಂಡಿತವಾಗಿ ಶಕ್ತಿಶಾಲಿ ಮಂತ್ರಿಗಳು. ಒಳ್ಳೆಯ ಕೆಲಸ ಮಾಡುವಂತಹವರು. ಆದರೆ, ಇದಕ್ಕೆ ದುಡ್ಡು ಕೊಡುವಂತಹದ್ದರ ಬಗ್ಗೆ total ಆಗಿ ಈ ಸರ್ಕಾರದ ಧೋರಣೆ ಬಗ್ಗೆ ನನಗೆ ನೋವಿದೆ. ಏಕೆಂದರೆ, ಬಡವರಿಗೆ, ದುರ್ಬಲ ವರ್ಗದವರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಆರಾಧನಾ ಮಂದಿರಕ್ಕೆ ದುಡ್ಡು ಕೊಡಬಾರದು ಎನ್ನುವ ಧೋರಣೆ ಇರಬಹುದು ಎನ್ನುವ ಭಾವನೆ ನನಗೆ ಬರುತ್ತದೆ. ಬಹುಶಃ ಸರ್ಕಾರ ಎಚ್ಚೆತ್ತುಕೊಂಡು ಈ ಯೋಜನೆಯನ್ನು ರದ್ದು ಮಾಡಿ, ಇಲ್ಲದಿದ್ದರೆ ದುಡ್ಡು ಕೊಡಿ ಅಷ್ಟೇ.

ಉಪಾಧ್ಯಕ್ಷರು:– ಬಾಲಕೃಷ್ಣರವರು ಮಾತನಾಡಿ. ಒಂದು ನಿಮಿಷ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ನೀವು common ಆಗಿ ಎಲ್ಲಾ ಕ್ಷೇತ್ರಕ್ಕೂ 25 ಲಕ್ಷ ರೂಪಾಯಿಗಳನ್ನು ಕೊಟ್ಟುಬಿಡಿ. ಆಮೇಲೆ ಬೇರೆಯವರಿಗೆ ನಿಮ್ಮ ಕೋಟಾದಲ್ಲಿ ಯಾರಿಗೆ ಬೇಕಾದರೂ ಕೊಟ್ಟುಕೊಳ್ಳಿ. ಆದರೆ, minimum 25 ಲಕ್ಷ ಕೊಟ್ಟರೆ ಗೌರವವಾಗಿ ಕೆಲಸ ಮಾಡಬಹುದು. ಇಲ್ಲದಿದ್ದರೆ ಆರಾಧನಾ ಕಮಿಟಿಯನ್ನು ನೀವು ರದ್ದು ಮಾಡಿ. ಅದರಿಂದ ಪ್ರಯೋಜನವಿಲ್ಲ. ಅದು ಬಡವರು ದೇವಸ್ಥಾನಗಳನ್ನು ಕಟ್ಟಿಕೊಳ್ಳುವಂತಹ ಸಮಿತಿ.

(ಗೊಂದಲ)

ಶ್ರೀ. ಕೆ.ಎಂ.ಶಿವಲಿಂಗೇಗೌಡ:– ಇದಕ್ಕೆ ಕಾಂಗ್ರೆಸ್‌ನವರು ಮೆಂಬರ್‌ಗಳು. ಸರ್ಕಾರದ ಪರವಾಗಿ ಇರುತ್ತಾರಲ್ಲಾ, ಅವರಿಗೆ ಬೇರೆ 5 ಸಾವಿರ ರೂಪಾಯಿಗಳಂತೆ ಹಂಚಿಕೊಡಬೇಕು. ಅವರು ಬಿಡುವುದಿಲ್ಲ.

(ಗೊಂದಲ)

ಶ್ರೀ. ವೆಂಕಟರಾವ್ ನಾಡಗೌಡ:– 25 ಸಾವಿರ ಕೊಟ್ಟರೆ ಯಾವುದಕ್ಕೂ ಆಗುವುದಿಲ್ಲ.

(ಗೊಂದಲ)

ಶ್ರೀ. ವೈ.ಎನ್.ರುದ್ರೇಶ್‌ಗೌಡ:– 25 ಸಾವಿರ ರೂಪಾಯಿಗಳು ಹೇಗೆ ಆಗುತ್ತದೆ.

(ಗೊಂದಲ)

ಉಪಾಧ್ಯಕ್ಷರು:– ನಿಮ್ಮ ಭಾವನೆಯನ್ನು ಪ್ರಮುಖರು ಹೇಳಿದ್ದಾರೆ. ಡಾಕ್ಟರ್‌ರವರೇ ಉತ್ತರ ಕೊಡಿ. ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ. ವೆಂಕಟರಾವ್ ನಾಡಗೌಡ:– ದಯವಿಟ್ಟು ಸಮಿತಿ ರದ್ದು ಮಾಡುವುದಕ್ಕೆ ಹೇಳಿ.

(ಗೊಂದಲ)

ಶ್ರೀ. ಎಂ.ಟಿ.ಕೃಷ್ಣಪ್ಪ:– ಅವರಿಗೆ ಬೇಕಾದವರಿಗೆ 2 ಲಕ್ಷ, 3 ಲಕ್ಷ ಕೊಟ್ಟಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ. ಸಿ.ಎಸ್.ಪುಟ್ಟೇಗೌಡ:– ಮಾನ್ಯ ಉಪಾಧ್ಯಕ್ಷರೆ, ಇವರು ಎಲ್ಲೆಲ್ಲಿ ಹೋದಾಗ, ಮಂತ್ರಿ ಮಾಡಿ, ಮುಖ್ಯಮಂತ್ರಿ ಮಾಡಿ ಎಂದು ಕೇಳುವುದಕ್ಕೆ ಹೋದಾಗ, ವರ ಕೊಟ್ಟ ದೇವರಿಗೆಲ್ಲಾ 30–50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಶಾಸಕರು ಕೊಟ್ಟ ಲೆಟರ್‌ಗಳಿಗೆ ಒಂದು–ಎರಡು ಲಕ್ಷ ರೂಪಾಯಿಗಳನ್ನೂ ಕೊಟ್ಟಿಲ್ಲ. ಮುಜರಾಯಿಯಲ್ಲಿಯೂ ಹಾಗೂ ಆರಾಧನಾ ಯೋಜನೆಯಲ್ಲಿಯೂ ಕೂಡ ಕೊಟ್ಟಿಲ್ಲ. ದಯಮಾಡಿ ಅದು ಆಗಬಾರದು.

(ಗೊಂದಲ)

ಉಪಾಧ್ಯಕ್ಷರು:– ಸರಿ ತಾವು ಕುಳಿತುಕೊಳ್ಳಿ. ಭಾವನೆ ಹೇಳಿದ್ದೀರಿ. ಸಾಕು ಕುಳಿತುಕೊಳ್ಳಿ. ಡಾಕ್ಟರ್ ನೀವು ಉತ್ತರಿಸಿ, ನೀವು ಕುಳಿತುಕೊಳ್ಳಿ. ಉತ್ತರ ಹೇಳಿ.

ಡಾ: ವಿ.ಎಸ್.ಆಚಾರ್ಯ:– ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಸದಸ್ಯರ ಅಭಿಪ್ರಾಯ ಗೊತ್ತಾಗಿದೆ. ಆದರೆ, ಒಂದು ವಿಷಯ ಅವರೂ ಗ್ರಹಿಸಿಕೊಳ್ಳಬೇಕು. ರಾಜ್ಯದ 30 ಜಿಲ್ಲೆಗಳಲ್ಲಿಯೂ ಯಾರಿಗೆ ಈ ಹಿಂದೆ ಆರಾಧನಾ ಯೋಜನೆಯಲ್ಲಿ ಕೊಡುತ್ತಿದ್ದರು, ಅಂತಹ ದೇವಸ್ಥಾನಗಳಿಗೂ ಸಹ ಸಹಾಯ ಸಿಕ್ಕಿದೆ. ಆದರೆ, ಈಗ ಅವರ ಅಭಿಪ್ರಾಯವೇನು ಎಂಬುದು ಗೊತ್ತಾಗಿದೆ. ಅದನ್ನು ಅನುಸರಿಸಿ ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ ನಾನು ಹೇಳುತ್ತೇನೆ. ಆರಾಧನಾ ಯೋಜನೆಯಡಿಯಲ್ಲಿ ದೇವಸ್ಥಾನಗಳಿಗೆ ದುಡ್ಡು ಕೊಡುತ್ತೀರಿ. ಎಲ್ಲಾ ಸದಸ್ಯರ ಅಭಿಪ್ರಾಯವೇನಿದೆ ಎಂದರೆ, ತಾರತಮ್ಯ ಮಾಡುತ್ತೀರಿ ಎಂದು ಇದೆ. ನನಗೆ ಕೊಡುವುದು, ಇನ್ನೊಬ್ಬರಿಗೆ ಕೊಡುವುದು, ಯಾರಿಗೋ ಕೊಡುವುದು ಬಹಳ ಮುಖ್ಯವಲ್ಲ. ನಾನು ಪತ್ರ ಬರೆದ ಮೇಲೆ ನನಗೂ ಸ್ವಲ್ಪ ದುಡ್ಡನ್ನು ಕೊಟ್ಟಿದ್ದಾರೆ. ಅದನ್ನು ನಾನು ಹೇಳುತ್ತಿದ್ದೇನೆ. ಪತ್ರ ಬರೆದಿದ್ದಕ್ಕೆ ನನಗೂ ಕೊಟ್ಟಿದ್ದಾರೆ.

ಡಾ: ವಿ.ಎಸ್.ಆಚಾರ್ಯ:– ಲಿಸ್ಟ್ ಕಳುಹಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ:– ಡಾಕ್ಟರೇ, ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೇನೆ. ಆಮೇಲೆ ನಾನು ಒಂದು ಪತ್ರ ಬರೆದೆ. ನಿಜ ಹೇಳಬೇಕು ಎಂದರೆ ನಮ್ಮ constituency ಯಲ್ಲಿ ಇನ್ನು ಯಾರೋ ಒಬ್ಬರು ಒಂದು ಆರ್ಡರ್ ತಂದಿದ್ದರು. ದೇವಸ್ಥಾನಗಳಿಗೆ ದುಡ್ಡು ಕೊಟ್ಟಿದ್ದಾರೆ ಎಂದು ಆರ್ಡರ್ ಅನ್ನು ತಂದಿದ್ದರು. ನಮ್ಮ constituency ಯಲ್ಲಿ ಇನ್ನು ಯಾರೋ ಬೇರೆಯವರು ಒಬ್ಬ ಆರ್ಡರ್ ತೆಗೆದುಕೊಂಡು ಬಂದು ಜನಗಳಿಗೆ ತೋರಿಸುತ್ತಿದ್ದ. He is neither MLA nor MLC nor anything. ಅವನು ಒಂದು ಪತ್ರ ತೆಗೆದುಕೊಂಡು ಬಂದು ಎಲ್ಲಾ ಕಡೆ

ತೋರಿಸುತ್ತಿದ್ದ. ನಾನು ಮಾಡಿಸಿಕೊಂಡು ಬಂದಿದ್ದೇನೆ ಎಂದು ಹೇಳುತ್ತಿದ್ದ. ಇದೇನಪ್ಪಾ ಇವನು ಯಾರು ಈ ಪತ್ರ ತಂದಿದ್ದಾನೆ ಎಂದು ನಾನು ಅವರಿಗೆ ಒಂದು ಪತ್ರ ಬರೆದೆ. ಆಮೇಲೆ ನನಗೂ ಒಂದಿಷ್ಟು ದೇವಸ್ಥಾನಗಳಿಗೆ ಕೊಟ್ಟಿದ್ದಾರೆ O.K. ಆದರೆ, ಇವರು ಏನು ಮಾಡಿದ್ದಾರೆ ಎಂದರೆ, ನಮ್ಮ constituency ಯಲ್ಲಿ ಯಾರಿಗೋ ಕೊಟ್ಟಿದ್ದಾರೆ. ಅಲ್ಲಿ ಎಂ.ಎಲ್.ಎ.ಗಳಿಗೆ constituency ಯಲ್ಲಿ ಕೊಡುವುದಿಲ್ಲ. ನಾನು ಹೇಳುತ್ತೇನೆ. ನಮ್ಮ constituency ಗೆ ಕೊಟ್ಟಿರುವುದನ್ನು ಹಾಗೂ ಎಲ್ಲರಿಗೂ ಕೊಟ್ಟಿರುವುದನ್ನೂ withdraw ಮಾಡಿ ಎಲ್ಲರಿಗೂ ಸಮಾನವಾಗಿ ಹಂಚಿ. ಕೇವಲ ನಿಮ್ಮ constituency ಯಲ್ಲಿಯೇ ದೊಡ್ಡ ದೇವರೇ? ನಮ್ಮಲ್ಲಿರುವ ದೇವರು ದೊಡ್ಡ ದೇವರಲ್ಲವೇ? ಇಲ್ಲಿ ಜನಗಳಿಗೆ ವೋಟ್ ಕೊಟ್ಟಿರುವವರು ಹೇಳಬೇಕೇ ಬೇಡವೇ? ನಾನು ಹೇಳುತ್ತೇನೆ, I demand, ಆಚಾರ್ಯರವರೆ, ನೀವು ಸೀನಿಯರ್ ಇದ್ದೀರಿ. ನೀವು ಕೊಟ್ಟಿರುವ ಆರ್ಡರ್ಸ್‌ಅನ್ನು ವಾಪಸ್ಸು ತೆಗೆದುಕೊಂಡು ಎಲ್ಲರಿಗೂ ಸಮಾನವಾಗಿ ಹಂಚಿ. ಎರಡು ಲಕ್ಷ ಬರಲಿ, ಮೂರು ಲಕ್ಷ ಬರಲಿ ಎಲ್ಲಾ ಎಂ.ಎಲ್.ಎ.ಗಳಿಗೂ ಸಮಾನವಾಗಿ ಹಂಚಿ.

ಶ್ರೀ ಬಂಡೆಪ್ಪ ಕಾಶೆಂಪೂರ್:– ಮೊನ್ನೆ 15 ದಿವಸಗಳಲ್ಲಿ ಒಂದು ಆರ್ಡರ್ ಮಾಡಿದ್ದಾರೆ. ಇಡೀ ರಾಜ್ಯಕ್ಕೆ ಕೊಡಬೇಕು ಎಂದು ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ:– ಏಕೆ ಹೀಗೆ ಮಾಡುತ್ತೀರಿ? ಏಕೆ ಈ ರೀತಿಯ partisian attitude? ನಾವು ಇಲ್ಲಿ ಹಣ approve ಮಾಡಿ ಕೊಡುವಾಗ ಹೀಗೆ ಕೊಡಿ ಎಂದು ಹೇಳಿದ್ದೇವೆಯೇ? ಕೊಟ್ಟು ಬಿಡಿ, ನಿಮಗೆ ಇಷ್ಟ ಬಂದ ಹಾಗೆ ಮಾಡಿಕೊಳ್ಳಿ ಎಂದು ಹೇಳಿದ್ದೇವೆಯೇ? This is not correct. ಏನೋ ಒಂದು ಕಡೆ ಆದರೆ ಪರವಾಗಿಲ್ಲ. ಎಲ್ಲಾ ಕಡೆ ಹೀಗೇ ಆಗುತ್ತಿದೆ. ರಸ್ತೆಗಳು ನೋಡಿದರೆ ಹಾಗೆ, ಮನೆಗಳನ್ನು ನೋಡಿದರೆ ಹೀಗೆ, ದೇವಸ್ಥಾನಗಳನ್ನು ಕೊಡುವುದು ಹಾಗೆ ಯಾವ ರೀತಿ ಇದು. ನೀವು ಒಂದು ಕಡೆ inclusive growth ಎಂದು ಭಾಷಣ ದೊಡ್ಡದಾಗಿ, ಬಜೆಟ್‌ಗಳಲ್ಲಿ ಬರೆದುಕೊಳ್ಳುವುದು. Inclusive growth, can you call it

as inclusive growth? Is it coming under the inclusive growth principle? This is not correct.

ಶ್ರೀ ಸಿ.ಎಸ್.ಪುಟ್ಟೇಗೌಡ:– ಇದರಿಂದ ಎಂ.ಎಲ್.ಎ.ಗಳಿಗೆ ಅವಮಾನವಾಗುತ್ತದೆ. ನಾವು ತಂದಿದ್ದೇವೆ ಎಂ.ಎಲ್.ಎ.ಗಳಿಗೆ ತರುವುದಕ್ಕೆ ಯೋಗ್ಯತೆ ಇಲ್ಲವೆಂದು ಎಲ್ಲಾ ಕಡೆ ಹೇಳುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಾನು ನಿಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ದಯಮಾಡಿ ಮಾಡಿರುವಂಥದ್ದನ್ನು withdraw ಮಾಡಲಿ. ಏನೋ ಒಂದು ಲಕ್ಷ ಎರಡು ಲಕ್ಷ ಹೆಚ್ಚಾಗಿ ಕೊಟ್ಟಿದ್ದೀರಿ ಅದನ್ನು ಬಿಟ್ಟುಬಿಡಿ. Ruling Partyಯವರಿಗೆ ಐದೂವರೆ ಲಕ್ಷ ಹೆಚ್ಚಾಗಿ ಕೊಟ್ಟಿದೆ. I can understand. ಒಬ್ಬರಿಗೂ ಏನೂ ಕೊಟ್ಟಿಲ್ಲ, ಕೆಲವರಿಗೆಲ್ಲ 25 ಲಕ್ಷ, 30 ಲಕ್ಷ, ಒಂದು ಕೋಟಿ, ಒಂದೂವರೆ ಕೋಟಿ ಹೀಗೆಲ್ಲಾ ಕೊಡುತ್ತೀರಲ್ಲ ಇದನ್ನು ಯಾವ ನ್ಯಾಯ ಎಂದು ಕರೆಯಬೇಕು? Is it equitable distribution? This is not correct. ನಾವು ಇದನ್ನು ಒಪ್ಪುವುದಿಲ್ಲ. ಇಡೀ ವಿರೋಧ ಪಕ್ಷದವರು ಇದನ್ನು ವಿರೋಧ ಮಾಡುತ್ತೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್:– ನಾವು ಧರಣಿ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ:– ಇದನ್ನು ವಾಪಸ್ಸು ತೆಗೆದುಕೊಂಡು ಸಮಾನವಾಗಿ ಹಂಚುವ ಕೆಲಸವನ್ನು ಮಾಡಬೇಕು. ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಇದನ್ನು ನೀವು ಹೇಳಬೇಕು.

ಉಪಾಧ್ಯಕ್ಷರು:– ಮಾನ್ಯ ನೆಹರು ಒಲೇಕಾರ್‌ರವರೇ ಕುಳಿತುಕೊಳ್ಳಿ. ಶಾಸಕರು ಮಾತನಾಡುತ್ತಿದ್ದಾರೆ. ಮಾನ್ಯ ರಮಾನಾಥ ರೈ ಅವರೇ ತಮಗೆ ಅವಕಾಶ ಕೊಟ್ಟಾಯಿತು. ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರೇ ಹೇಳಿ.

ಶ್ರೀ ಬಿ.ರಮಾನಾಥ ರೈ:– ಆರಾಧನಾ ಯೋಜನೆಗೆ ಇಷ್ಟರವರೆಗೆ ಯಾವ ರೀತಿ ದುಡ್ಡು ಕೊಡುತ್ತಿದ್ದರೋ ಹಾಗೆ ಕೊಡಲಿ. ಹಿಂದೆ ಹಣ ಕೊಟ್ಟಿದ್ದು ಕಡಿಮೆಯಿದ್ದರೆ ಅಷ್ಟೇ ಕೊಡಿ. ಕಳೆದ 10–15 ವರ್ಷಗಳಿಂದ ಯಾವ ರೀತಿ ಕೊಡುತ್ತಿದ್ದರೋ ಹಾಗೇ ಕೊಡಲಿ.

ಉಪಾಧ್ಯಕ್ಷರು:– ಕೊನೆಯ ಉಪ ಪ್ರಶ್ನೆ ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರೇ, ಮಾನ್ಯ ರಮಾನಾಥ ರೈ ರವರೇ ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಟ್ಟಾಯಿತು. ಮಾನ್ಯ ಬಂಡೆಪ್ಪ ಕಾಶೆಂಪೂರ್ ಮಾತನಾಡಿ.

ಶ್ರೀ ಬಂಡೆಪ್ಪ ಕಾಶೆಂಪೂರ್:– ಸನ್ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಹೇಳಿರುವುದು ಸರಿಯಾಗಿದೆ. 15–20 ದಿನಗಳ ಹಿಂದೆ ಜನವರಿ 19ನೇ ತಾರೀಖಿನಲ್ಲಿ ಒಂದು order ಮಾಡಿದ್ದಾರೆ. ಸರ್ಕಾರದಿಂದ ಸುಮಾರು ಐದು ಆದೇಶಗಳು ಬಂದಿದೆ. ಅದರಲ್ಲಿ ಒಂದೊಂದು ಕ್ಷೇತ್ರಕ್ಕೆ ಒಂದೊಂದು ಕೋಟಿ ಎಂದಿದೆ ಇದು ಯಾರ ದುಡ್ಡು? ರಾಜ್ಯ ಸರ್ಕಾರದ ಹಣ ಯಾರಿಗೋ ಕೊಟ್ಟೋ ಎಂ.ಎಲ್.ಎ.ಗಳೇ ಹಂಚಿಕೊಳ್ಳುವುದಲ್ಲ. ನಿಮ್ಮಲ್ಲಿ ಎಂ.ಎಲ್.ಎ.ಗಳು ಹಂಚಿಕೊಂಡಿದ್ದೀರಿ. ಇದು ಒಂದು. ಏಕೆ ನಾವೆಲ್ಲಾ ಗೆದ್ದು ಬಂದಿಲ್ಲವೇ? ನಮ್ಮಲ್ಲಿ ದೇವಸ್ಥಾನಗಳಿಲ್ಲವೇ ನಮ್ಮಲ್ಲಿ ದೇವರಿಲ್ಲವೇ? ಈ ರೀತಿ ಮಾಡಿ ಅರ್ಧ ಚೆಂಡು ತಿಂದಿದ್ದು, ಇನ್ನು ಮುಂದೆ ಅರ್ಧ ಚೆಂಡು ತಿನ್ನುತ್ತೀರಿ.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ನೆಹರು ಓಲೇಕಾರ್ ಕುಳಿತುಕೊಳ್ಳಿ. ಗೌಡರೆ ಕುಳಿತುಕೊಳ್ಳಿ ನಿಮಗೂ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಸಿ.ಎಸ್.ಪುಟ್ಟೇಗೌಡ:– ಎಲ್ಲವನ್ನೂ ಒಬ್ಬರಿಗೆ ಕೊಡಿ ಸಾಕು. ಇವರೊಬ್ಬರೆ ಎಂ.ಎಲ್.ಎ. ಆಗಿ ಬಂದಿರುವುದು, ಬೇರೆಯವರು ಬಂದಿಲ್ಲವೇ?

(ಗೊಂದಲ)

ಉಪಾಧ್ಯಕ್ಷರು:– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ರಮಾನಾಥ ರೈ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ ನೆಹರು ಓಲೇಕಾರ್ (xxx) ಎಂದು ಮಾತನಾಡುತ್ತಿದ್ದಾರೆ. ಅವರು (xxx) ಎಂದರು.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಓಲೇಕಾರ್ ಕುಳಿತುಕೊಳ್ಳಿ. ನಾನು recordಗೆ ಹೋಗಲು ಬಿಡುವುದಿಲ್ಲ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್:– ಬಿ.ಜೆ.ಪಿ. ಸದಸ್ಯರಿಗೆ ಮಾನ ಮರ್ಯಾದೆಯಿದೆಯೇ? ಮೊದಲು ಅವರ ಮೇಲೆ action ತೆಗೆದುಕೊಳ್ಳಿ, ಹೊರಗಡೆ ಹಾಕಿ ಅವರನ್ನು. (xxx) ಎಂದು ಹೇಳುತ್ತಾರೆ. ಈ ರೀತಿ ಮಾತನಾಡುವುದು ಇವರಿಗೆ ಶೋಭೆ ತರುತ್ತದೆಯೇ?

(ಈ ಹಂತದಲ್ಲಿ ಜೆ.ಡಿ.ಎಸ್. ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು)

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ನಾನು ಸೂಚನೆ ಕೊಡುತ್ತಿದ್ದೇನೆ. ಯಾವುದೇ ರೀತಿ provoke ಆಗಿ ಮಾತನಾಡುವುದಕ್ಕೆ ಇಲ್ಲಿ ಅವಕಾಶವಿಲ್ಲ. ಆ ರೀತಿಯ ಪದವನ್ನು ಕಡತದಿಂದ ತೆಗೆಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ಕ್ಷಮೆ ಕೇಳಬೇಕು.

(ಗೊಂದಲ)

ಉಪಾಧ್ಯಕ್ಷರು:– ಇಲ್ಲಿ provocation ಗೆ ಅವಕಾಶವಿಲ್ಲ. ಈಗಾಗಲೇ ಸೂಚನೆ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:– ಮೊದಲು ಮರ್ಯಾದೆಯಾಗಿ ಮಾತನಾಡುವುದನ್ನು ಕಲಿತುಕೊಳ್ಳಿ ನಂತರ ಬೇರೆ ಕೆಲಸ.

(ಗೊಂದಲ)

(xxx):– (ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ)

ಉಪಾಧ್ಯಕ್ಷರು:– ಮಾನ್ಯ ಶಿವಣ್ಣನವರೇ ಸಮರ್ಥನೆ ಬೇಡ. ಇಲ್ಲಿ ಸಮರ್ಥನೆಗೆ ಅವಕಾಶವಿಲ್ಲ. provocation ಗೆ ಅವಕಾಶವಿಲ್ಲ. ಮಾನ್ಯ ನೆಹರು ಓಲೇಕಾರ್ ರವರೆ ಈ word ಅನ್ನು withdraw ಮಾಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಎಲ್ಲರೂ ಇದೇ ರೀತಿಯಾದರೆ ಏನು ಮಾಡಬೇಕು ಹೇಳಿ?

(ಗೊಂದಲ)

ಉಪಾಧ್ಯಕ್ಷರು:– ಆ ರೀತಿ ಹೇಳಿದ ಶಬ್ದವನ್ನು ಕಡತದಿಂದ ತೆಗೆಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ. ಸಂಸದೀಯ ಸಚಿವರು ಹೇಳುತ್ತಾರೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:– ಅವರು ಕ್ಷಮಾಪಣೆಯನ್ನು ಕೇಳಬೇಕು. ಕಡತದಿಂದ ತೆಗೆದು ಹಾಕಬಹುದೆಂದು ಏನು ಬೇಕಾದರೂ ಮಾತನಾಡಿ ಕಡತದಿಂದ ತೆಗೆದು ಹಾಕಬಹುದಾ? ಏನ್ರೀ ನೀವು ಈ ರೀತಿ ಮಾತನಾಡುತ್ತೀರಿ?

(ಗೊಂದಲ)

ಉಪಾಧ್ಯಕ್ಷರು:– ಅದಕ್ಕೆ ಅವಕಾಶ ಕೊಡುವುದಿಲ್ಲ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):– ಮಾನ್ಯ ಉಪಾಧ್ಯಕ್ಷರೆ ಇವತ್ತು ಮಾನ್ಯ ಸದಸ್ಯರಾದ ರಮಾನಾಥ ರೈ ರವರು ವಿಶೇಷವಾಗಿ ಆರಾಧನಾ ಯೋಜನೆಯಡಿಯಲ್ಲಿ ಪ್ರಶ್ನೆ ಕೇಳಿದ್ದಾರೆ. ಇಲ್ಲಿ ತಾರತಮ್ಯವಾಗಿದೆಯೆಂಬ

ಪ್ರಶ್ನೆ ಉದ್ಭವವಾಗಿದೆ. ತಾರತಮ್ಯವಾಗುವುದಕ್ಕೆ ಯಾರೂ ಕೂಡ ಅವಕಾಶ ಕೊಡಬಾರದು ವಿಶೇಷವಾಗಿ ದೇವರ ಕಾರ್ಯದಲ್ಲಿ, ದೊಡ್ಡ ದೇವರು ಚಿಕ್ಕ ದೇವರು ಎಂದಿಲ್ಲ.

ಶ್ರೀ ಆರ್. ರೋಷನ್ ಬೇಗ್:– ಮಾನ್ಯ ಅಧ್ಯಕ್ಷರೆ...

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್:– ಹೇಳುತ್ತೇನೆ. ನೀವು ಎರಡು ದಿವಸಗಳಾದ ನಂತರ ಇವತ್ತು ಬಂದಿದ್ದೀರಿ. ಎರಡು ದಿವಸಗಳಿಂದ ನೀವು ಬರುವವರೆಗೆ ಕಾದಿದ್ದೇವೆ. ಈಗ ಎರಡು ನಿಮಿಷ ನಿಮಗೆ ಕಾಯುವುದಕ್ಕಾಗುವುದಿಲ್ಲವೇ? I will tell. I am coming to that.

ಉಪಾಧ್ಯಕ್ಷರು:– ರೋಷನ್ ಬೇಗ್ ರವರೇ ಅವರು ಉತ್ತರಿಸುತ್ತಿದ್ದಾರೆ.

ಶ್ರೀ ಆರ್.ರೋಷನ್ ಬೇಗ್:– ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಎಸ್.ಸುರೇಶ್ ಕುಮಾರ್:– ತಾರತಮ್ಯವಾಗಿದೆಯೆಂದು ಹೇಳುತ್ತಿದ್ದಾರೆ. ಅದನ್ನು ಸರಿಪಡುವ ಕರ್ತವ್ಯ ಸರ್ಕಾರದ್ದು ಅದನ್ನು ಮಾಡುತ್ತೇವೆ. ಮಾನ್ಯ ಸದಸ್ಯರಾದ ನೆಹರು ಓಲೇಕಾರ್ ರವರು ಅಥವಾ ಯಾವುದೇ ಸದಸ್ಯರು ಸದನದಲ್ಲಿ ಮಾತನಾಡುವಾಗ ಮಾತಿನ ಬಗ್ಗೆ ಎಚ್ಚರವಿರಬೇಕು. ಇಡೀ ರಾಜ್ಯ ನಮ್ಮನ್ನು ನೋಡುತ್ತಿದೆ. ಮೇಲಿನ ಗ್ಯಾಲರಿಯಿಂದ ಕೂಡ ವೀಕ್ಷಿಸುತ್ತಿದ್ದಾರೆ. ನಾನು ಮಾನ್ಯ ಸದಸ್ಯರಲ್ಲೂ ಕೂಡ ಕೇಳುತ್ತೇನೆ. ದಯವಿಟ್ಟು ನಮಗಷ್ಟೇ ಉದ್ವೇಗವಿದ್ದರೂ ನಾವು ಎಷ್ಟೇ ಉದ್ರೇಕಕ್ಕೆ ಒಳಗಾದರೂ ಕೂಡ ಈ ರೀತಿ ಮಾತನ್ನು ಉಪಯೋಗಿಸುವುದು ನಮಗೆ ಶೋಭೆ ತರುವುದಿಲ್ಲ. ವಿಶೇಷವಾಗಿ ನಾವು ಜನರಿಂದ ಆಯ್ಕೆಯಾಗಿರುವವರು.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಅಲ್ಲಿ ಏನು ಉಪಯೋಗಿಸಿದ್ದಾರೆ ಎಂದು ಹೇಳಿ.

ಶ್ರೀ ಎಸ್.ಸುರೇಶ್ ಕುಮಾರ್:– ಇಲ್ಲ ನಾನು ಕೇಳಿಸಿಕೊಂಡಿಲ್ಲ. ದಯವಿಟ್ಟು ಆ ಪದವನ್ನು ಕಡತದಿಂದ ತೆಗೆದುಹಾಕಿ ಸದನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ತನ್ವೀರ್ ಸೇಠ್:– ಸದನದಲ್ಲಿ ಸದಸ್ಯರಿಂದ ಈ ರೀತಿ ವರ್ತನೆ ಆಗುತ್ತಿರುವುದು ಸರಿಯಲ್ಲ. ಇದು ಎಲ್ಲೋ ಒಂದು ಕಡೆ ಪ್ರಚೋದನೆ ಕೊಡುವಂಥ ಕಾರ್ಯ. ಇದನ್ನು ಕಡತದಿಂದ ತೆಗೆದುಹಾಕುವುದು ಮಾತ್ರವಲ್ಲ. ಸದಸ್ಯರು ಕ್ಷಮೆ ಕೇಳಬೇಕು. ಅಥವಾ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಹತ್ತು ನಿಮಿಷವಾದರೂ ಅವರನ್ನು ಹೊರಹಾಕಿ.

ಶ್ರೀ ಸಿದ್ದರಾಮಯ್ಯ:– ಅದನ್ನು ಏನೋ ದೊಡ್ಡಸ್ತಿಕೆಗೆ ಮಾಡುವುದಲ್ಲ. ಈ ರೀತಿ ಪದೇ ಪದೇ repeat ಆಗಬಾರದು ಬೇರೆಯವರು ಈ ರೀತಿಯ ಪದಗಳನ್ನು ಬಳಸುವುದು ಕೂಡ ತಪ್ಪಬೇಕು. ಆ ರೀತಿಯ ಅವಾಚ್ಯ ಶಬ್ದವನ್ನು ಬಳಸುವುದಾದರೆ ಎಲ್ಲಾ ಸದಸ್ಯರು ಅದನ್ನು ಕೇಳಿಸಿಕೊಳ್ಳಬೇಕಾ? ನಾನೂ ಬಳಸಬಾರದು, ಅವರೂ ಬಳಸಬಾರದು, ಯಾವ ಸದಸ್ಯರು ಕೂಡ ಬಳಸಬಾರದು O.K. ಆದರೆ ಅದನ್ನು ಬಳಸುವುದಕ್ಕೆ ಅವರಿಗೆ ಪ್ರಚೋದನೆ ಏನಿತ್ತು? ಏನು ಪ್ರಚೋದನೆಯಿಲ್ಲವೆಂದಾದರೆ ಇದ್ದಕ್ಕಿದ್ದ ಹಾಗೆ ಎದ್ದುನಿಂತು ಕುಳಿತುಕೋ (xxx) ಎಂದರೆ, ಇದನ್ನು ಬಳಸಬಹುದು ಎಂದಾದರೆ record ನಲ್ಲಿ ಇರಲಿ ಬಿಡಿ. This is not correct. ತಪ್ಪು ಮಾಡಿರುವುದು ನಿಜ. ಅವಾಚ್ಯ ಶಬ್ದಗಳನ್ನು ಬಳಸಿರುವುದು ನಿಜ. ಅದು un-parliamentary word, ಅದಕ್ಕೆ ತಪ್ಪು ಮಾಡಿದ್ದೇನೆಂದು ಕ್ಷಮೆ ಕೇಳುವುದಕ್ಕಾಗುವುದಿಲ್ಲವೆಂದರೆ parliamentary system ಅಡಿಯಲ್ಲಿ ಏನು ಮಾಡಬೇಕು? ನೀವು ಹೇಳಿ senior ಇದ್ದೀರಿ, ನೀವು ವಿರೋಧ ಪಕ್ಷದಲ್ಲಿ ಕೆಲಸ ಮಾಡಿರುವವರು.

(xxx):– (ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಯಾವ ಶಾಸಕರೂ emotional ಆಗಿ ಮಾತನಾಡಬಾರದು ಎಂದು ಮಾನ್ಯ ಸಚಿವರಾದ ಶ್ರೀ ಸುರೇಶ್‌ಕುಮಾರ್ ರವರು ಹೇಳಿದ್ದಾರೆ. ಈಗ ಒಂದು ಪದ ಪ್ರಯೋಗ ಮಾಡಿದ್ದಾರೆ. ಅದನ್ನು ಮಾನ್ಯ ಉಪಾಧ್ಯಕ್ಷರು ಕಡತದಿಂದ ತೆಗೆದು ಹಾಕಬೇಕು. ಆ ಪದ ಪ್ರಯೋಗವನ್ನು ಅವರು emotional ಆಗಿ ಮಾತನಾಡಿದ್ದಾರೆ. ಅದು ನಮಗೆ ಬೇರೆ ರೀತಿ ಅರ್ಥವಾಗಿದೆ. ನಮ್ಮ ಉತ್ತರ ಕರ್ನಾಟಕದ ಕಡೆ ಬೇರೆ ಬೇರೆ ಪದಗಳನ್ನು ಹಚ್ಚಿ ಮಾತನಾಡುತ್ತಾರೆ. ನಿಮಗೆಲ್ಲಾ ಗೊತ್ತಿದೆ. ಅದನ್ನೆಲ್ಲಾ ಈಗ ಹೇಳುವುದು ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಉತ್ತರ ಕರ್ನಾಟಕದಲ್ಲಿ "ಬೆರಕೆ"ಯವರು ಅಂತ ಹೇಳುತ್ತಾರೆ. ಅಲ್ಲಿ ಹಾಗೆಂದರೆ intelligent ಎಂದು ಅರ್ಥ. ಆದರೆ ನಮ್ಮ ಕಡೆಯವರಿಗೆ ಅದು ಬೇರೆ ಅರ್ಥ ಬರುತ್ತದೆ. ಹಾಗೆಲ್ಲಾ ಬಳಸುವುದಕ್ಕೆ ಬರುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಸದಸ್ಯರಲ್ಲಿ ವಿನಂತಿ. ಬಹುಶಃ ಇಲ್ಲಿ provocation ಗೆ ಯಾವುದೇ ಉದ್ರೇಕಕಾರಿ ಶಬ್ದಗಳ ಬಳಕೆಗೆ ಹಾಗೂ un-parliamentary ಶಬ್ದಗಳ ಬಳಕೆಗೆ ಅವಕಾಶ ಕೊಡುವುದಿಲ್ಲ. ಅವರು ಬಳಸಿದ ಪದವನ್ನು withdraw ಮಾಡುವುದಕ್ಕೆ ಹೇಳಿ. ಆ ಪದವನ್ನು ಕಡತದಿಂದ ತೆಗೆದು ಹಾಕಿದ್ದೇನೆ. ಮಾನ್ಯ ಸದಸ್ಯರಾದ ನೆಹರು ಓಲೇಕಾರ್ ಅವರಲ್ಲಿ ಒಂದು ವಿನಂತಿ. ಯಾರಿಗಾದರೂ ನಿಮ್ಮ ಶಬ್ದಗಳಿಂದ ನೋವಾಗಿದ್ದರೆ ಅವರಲ್ಲಿ ವಿಷಾದ ವ್ಯಕ್ತಪಡಿಸಿದರೆ ಏನೂ ತಪ್ಪಾಗುವುದಿಲ್ಲ. ತಾವು ಒಂದು ರೀತಿಯಲ್ಲಿ ಸಮಾಧಾನಕರವಾದ ರೀತಿಯಲ್ಲಿ ವಿಷಾದವನ್ನು ವ್ಯಕ್ತಪಡಿಸಿದರೆ ಒಳ್ಳೆಯದು.

(ಗೊಂದಲ)

ಶ್ರೀ ನೆಹರು ಓಲೇಕಾರ್:– ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ಉದ್ದೇಶಿಸಿ ಹೇಳುತ್ತಿದ್ದೆ. ನಮ್ಮ ಸರ್ಕಾರ ಇದ್ದಾಗ ನಮ್ಮವರಿಗೆ ಹೆಚ್ಚು ಅನುದಾನ ಕೊಟ್ಟಿರಬಹುದು. ನಿಮ್ಮ ಸರ್ಕಾರ ಇದ್ದಾಗಲೂ ಕೂಡ ಆ ಭಾಗದ ಸದಸ್ಯರಿಗೆ ಹೆಚ್ಚು ಅನುದಾನ ಕೊಟ್ಟಿರುವಂತಹ ಉದಾಹರಣೆಗಳಿವೆ. ಆ ಉದಾಹರಣೆಗಳನ್ನು ತೆಗೆದು ನೋಡಿ ಎಂದು ಹೇಳುತ್ತಿದ್ದೆ. ಮಾನ್ಯ ಸದಸ್ಯರು ನನ್ನ ಕಡೆ ಪದೇ ಪದೇ ಕೈ ಮಾಡಿ ಹೇಳುತ್ತಿದ್ದರು. ಅವರ ಕೆಲಸ ನನ್ನ ಕಡೆ ಕೈ ಮಾಡಿ ಹೇಳುವುದಲ್ಲ. ಅವರನ್ನು ಕೂರಿಸಿ ಎಂದು ನಿಮ್ಮ ಕಡೆ ನೋಡಿ ನಾನು ಮಾತನಾಡುತ್ತಿದ್ದೆ.

(ಗೊಂದಲ)

ಉಪಾಧ್ಯಕ್ಷರು:– ಶ್ರೀ ಬಂಡೆಪ್ಪ ಕಾಶೆಂಪೂರ್ ರವರೇ, ಮೊದಲು ಅವರು ಮಾತನಾಡಲಿ. ನಂತರ ನೀವು ಮಾತನಾಡಿ.

(ಗೊಂದಲ)

ಶ್ರೀ ನೆಹರು ಓಲೇಕಾರ್:– ಸ್ಪೀಕರ್ ಚುನಾವಣೆಯಲ್ಲಿ ವಿರೋಧ ಪಕ್ಷದ ಸದಸ್ಯರು ಟೇಬಲ್ ಮೇಲೆ ಹತ್ತಿ ಕುಣಿದು ಅವಾಚ್ಯ ಪದಗಳನ್ನು ಬಳಸಿದರಲ್ಲಾ ಆ ರೀತಿ ಏನೂ ಆಗಿಲ್ಲ ಇಲ್ಲಿ. ನಾನು ಸರ್ಕಾರವನ್ನು ಕೇಳುತ್ತಿದ್ದೆ. ತಮ್ಮ ಕಡೆ ಸಂಬೋಧನೆ ಮಾಡಿ ಮಾತನಾಡುತ್ತಿದ್ದೆ. ಮಾನ್ಯ ಸದಸ್ಯರು ನನ್ನ ಕಡೆ ಕೈ ಮಾಡಿ ಕುಳಿತು ಕೊ, ಕುಳಿತು ಕೊ, ಎಂದು ಹೇಳುವ ಅವಶ್ಯಕತೆ ಇರಲಿಲ್ಲ. ಉಪಾಧ್ಯಕ್ಷರು ಹೇಳಬೇಕಾಗಿತ್ತು. ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ.

(ಗೊಂದಲ)

ಶ್ರೀ ನೆಹರು ಓಲೇಕಾರ್:– ಹಿಂದೆ ಸ್ಪೀಕರ್ ಚುನಾವಣೆಯಲ್ಲಿ ಟೇಬಲ್ ಮೇಲೆ ಹೋಗಿ, ಕುಣಿದು, ಹಾರಾಡಿ, ಅವಾಚ್ಯ ಶಬ್ದಗಳನ್ನು ಬಳಸಿದಂತಹ ಉದಾಹರಣೆಗಳನ್ನು ನಾವು ನೋಡಿದ್ದೇವೆ. ನಾನು ತಮ್ಮ ಕಡೆ ಸಂಬೋಧನೆ ಮಾಡಿ ಮಾತನಾಡುವಂತಹ ಸಂದರ್ಭದಲ್ಲಿ ನನಗೆ ತಡೆ ಉಂಟುಮಾಡುವಂತಹ ಕೆಲಸವನ್ನು ಹಾಗೂ ನಾನು ಮಾತನಾಡುವಾಗ ಮಧ್ಯೆ ಮಧ್ಯೆ ಎದ್ದು ನನಗೆ ನೇರವಾಗಿ ಸಂಬೋಧನೆ ಮಾಡುವಂತಹದ್ದು

ಸರಿಯಾದುದ್ದಲ್ಲ. ಒಂದು ವೇಳೆ ಅವರು ಮಾತನಾಡಿರುವುದಕ್ಕೆ ನಾನು ಉದ್ವೇಗದಿಂದ ಆ ಶಬ್ದ ಬಳಸಿದ್ದರೆ ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಈ ರೀತಿಯಾಗಿ ಮುಂದೆ ಆಗಬಾರದಾಗಿ ಅವರು ನೋಡಿಕೊಳ್ಳಬೇಕು.

(ಗೊಂದಲ)

ಉಪಾಧ್ಯಕ್ಷರು:– ಈ chapter ಮುಗಿಯಿತು.

(ಗೊಂದಲ)

ಉಪಾಧ್ಯಕ್ಷರು:– ಡಾ. ವಿ.ಎಸ್. ಆಚಾರ್ಯರವರೆ, ತಾರತಮ್ಯದ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಿ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್:– ಮಾನ್ಯ ಮಹೇಶ್‌ರವರು ಯುವ ನಾಯಕರಿದ್ದಾರೆ. ದಯಮಾಡಿ ಅವರು ಮಾತನಾಡಲಿ. ನಾನೂ ಸಹ ಈ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆಂದು, ಅವರು ಒಂದು ಮಾತನ್ನು ಹೇಳಿದರೆ ಒಳ್ಳೆಯದಾಗುತ್ತದೆ. ವಾತಾವರಣ ತಿಳಿಯಾಗುತ್ತದೆ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್:– ಅವರು ಕ್ಷಮೆ ಕೇಳಲಿ.

(ಗೊಂದಲ)

ಉಪಾಧ್ಯಕ್ಷರು:– ಅಮರೇಗೌಡರೇ, ತಾವು ಹೇಳಿದ್ದನ್ನು ಹೇಳಿ ಆಯಿತು. ತಾರತಮ್ಯ ಆಗದ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಹೇಳಿ ಆಗಿದೆ.